ದಿನಾಂಕಃ12-03-2025 ರಂದು ಪಿ.ಡಬ್ಲ್ಯೂ-1 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು ಃ **1, 4** ರಿಂದ **6** ಪ್ರತಿವಾದಿಯರ ಪರ ಶ್ರೀ.ಡಿ.ಟಿ.ಬಿ ವಕೀಲರಿಂದ ಃ

1. ನಾನು 3 ನೇ ತರಗತಿಯವರೆಗೆ ಶಿಕ್ಷಣ ಪಡೆದಿರುತ್ತೇನೆ. ಶಾಲಾ ದಾಖಲಾತಿಗಳ ಪ್ರಕಾರ ಯಾವ ದಿನ ನನ್ನ ಜನ್ಮ ದಿನಾಂಕವಾಗಿರುತ್ತದೆ ಎಂದು ನನಗೆ ಮಾಹಿತಿ ಇಲ್ಲಾ. ನಾನು ನನ್ನ ಆಧಾರ ಕಾರ್ಡನಲ್ಲಿ ಇರುವ ಜನ್ಮ ದಿನಾಂಕದ ಆಧಾರದ ಮೇಲೆ ವಾದ ಪತ್ರದಲ್ಲಿ ನನ್ನ ವಯಸ್ಸನ್ನು ನಮೂದಿಸಿರುತ್ತೇನೆ. 1 ನೇ ವಾದಿ ವಯಸ್ಸಿನಲ್ಲಿ ನನಗಿಂತ 2 ವರ್ಷ ಹಿರಿಯರು ಆಗಿರುತ್ತಾರೆ ಎಂದರೆ ಸರಿ. ನನ್ನ ಅಜ್ಜನ ಹೆಸರು ಪರಪ್ಪ ಇರುತ್ತದೆ. ಸದರಿ ನನ್ನ ಅಜ್ಜನ ಹೆಂಡತಿ ಹೆಸರು ಭೀಮವ್ವ ಇರುತ್ತದೆ. ನನ್ನ ಅಜ್ಜ ಬಹಳ ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ಸಾಕ್ಷಿಯು ಮುಂದುವರೆದು ನನ್ನ ಅಕ್ಕ ಮೃತ ಭೀಮವ್ವ ಇವರು ಹುಟ್ಟುವುದಕ್ಕಿಂತ ಪೂರ್ವದಲ್ಲಿಯೇ ನನ್ನ ಅಜ್ಜ ಮತ್ತು ಅಜ್ಜಿ ಇಬ್ಬರು ಮರಣ ಹೊಂದಿರುತ್ತಾರೆ ಎಂದು ನುಡಿಯುತ್ತಾರೆ.

2. ನನ್ನ ಅಕ್ಕ ಭೀಮವ್ವ ಸುಮಾರು 7 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ಆಕೆಯನ್ನು ಸಂಗಪ್ಪ ಸೊಲ್ಲಾಪೂರ ಇವರೊಂದಿಗೆ ಮದುವೆ ಮಾಡಿಕೊಟ್ಟಿರುತ್ತಾರೆ. ಸದರ ಸಂಗಪ್ಪ ಜೀವಂತ ಇರುತ್ತಾರೆ.ಸದರಿ ಭೀವವ್ವ ಇವರಿಗೆ ಮಕ್ಕಳು ಇರುವುದಿಲ್ಲ. ಸದರಿ ಸಂಗಪ್ಪ ಇವರನ್ನು ಪ್ರಸ್ತುತ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ನನ್ನ ಅಜ್ಜ ಪರಪ್ಪ ಇವರಿಗೆ ನಾಲ್ಕು ಜನ ಮಕ್ಕಳು ಇರುತ್ತಾರೆ, ಅವರ ಹೆಸರುಗಳು ಬಸಪ್ಪ, ರಾಮಪ್ಪ, ಮಲ್ಲಪ್ಪ ಮತ್ತು ಭೀಮಪ್ಪ ಇರುತ್ತವೆ. ಪ್ರಸ್ತುತ ದಾವೆ ಸಲ್ಲಿಸುವ ಪೂರ್ವದಲ್ಲಿ ಸದರಿ ಪರಪ್ಪ ಇವರಿಂದ ಎಷ್ಟು ಆಸ್ತಿಗಳು ಬಂದಿರುತ್ತವೆ ಎಂದು ದಾಖಲೆಗಳನ್ನು ಪರಿಶೀಲಿಸಿರುತ್ತೇನೆ. ಸದರಿ ಪರಪ್ಪ ತಮ್ಮ ಜೀವಿತಾವಧಿಯಲ್ಲಿ ಮಕ್ಕಳಿಗೆ ಆಸ್ತಿ ವಾಟ್ನಿ ಮಾಡಿಕೊಟ್ಟಿರುತ್ತಾರೆ. ಸದರಿ ವಾಟ್ನಿಯಾದ ಆಸ್ತಿಗಳ ಸರ್ವೆ ನಂಬರ ಮತ್ತು ಅವುಗಳ ಕ್ಷೇತ್ರ ನನಗೆ ಗೊತ್ತಿಲ್ಲ. ಸದರಿ ವಾಟ್ನಿಯ ಕುರಿತಾದ ದಾಖಲೆಗಳನ್ನು ನಾನು ಹಾಜರಪಡಿಸಿಲ್ಲ. ಸದರಿ ವಾಟ್ನಿಯಲ್ಲಿ ರಾಮಪ್ಪ, ಮಲ್ಲಪ್ಪ ಮತ್ತು ಭೀಮಪ್ಪ ಇವರಿಗೆ ತಲಾ 17 ಎಕರೆ ಜಮೀನು ಬಂದಿರುತ್ತದೆ. ಸದರಿ ಬಸಪ್ಪ ಇವರನ್ನು ನನ್ನ

ಅಜ್ಜ ಪರಪ್ಪನ ತಮ್ಮನಾದ ಗುರುಪಾದಪ್ಪ ಇವರು ದತ್ತಕ್ಕಕ್ಕೆ ತೆಗೆದುಕೊಂಡಿರುತ್ತಾರೆ. ನಮ್ಮ ಕುಟುಂಬಕ್ಕೆ ಇನಾಮ ಜಮೀನು ಇರುವ ಬಗ್ಗೆ ನನಗೆ ಮಾಹಿತಿ ಇಲ್ಲಾ. ಸಾಕ್ಷಿಯು ಮುಂದುವರೆದು ದಾವಾ ಜಮೀನುಗಳು ನನ್ನ ಅಜ್ಜನಾದ ಪರಪ್ಪನಿಂದ ಬಂದಿರುತ್ತವೆ ಎಂದು ಸ್ವತಃ ನುಡಿಯುತ್ತಾರೆ. ಸಾಕ್ಷಿಯು ಪುನಃ ಮುಂದುವರೆದು 17 ಎಕರೆ ಜಮೀನು ಬಂದಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಜಮೀನಿನ ಸರ್ವೆ ನಂಬರ ನನಗೆ ಗೊತ್ತಿಲ್ಲ. ಸದರಿ 17 ಎಕರೆ ಜಮೀನು ಯಾರ ಹೆಸರಿಗೆ ಮಂಜೂರು ಆಗಿರುತ್ತದೆ ಎಂದು ನಾನು ದಾಖಲೆ ತೆಗೆಸಿ ನೋಡಿಲ್ಲಾ.

3. ನನ್ನ ತಂದೆ 16 ಎಕರೆ, 4 ಎಕರೆ , 4 ಎಕರೆ, 5 ಎಕರೆ ಮತ್ತು 10 ಗುಂಟೆ ಜಮೀನುಗಳನ್ನು ಖರೀದಿಸಿರುತ್ತಾರೆ. ಈ ವಿಷಯ ನನ್ನ ವಾದ ಪತ್ರದಲ್ಲಿ ಬರೆಸಿರುತ್ತೇನೆ. ಸದರಿ ಜಮೀನುಗಳ ಕ್ರಯ ಪತ್ರಗಳನ್ನು ನಾನು ಹಾಜರಪಡಿಸಿಲ್ಲ. ಸದರಿ ಜಮೀನುಗಳನ್ನು ಖರೀದಿಸುವಾಗ ನಾನು ಮತ್ತು ನನ್ನ ಸಹೋದರ ಸಹೋದರಿಯರು ಎಲ್ಲರೂ ಜನಿಸಿದ್ದೆವು. ನನ್ನ ತಂದೆ ಜಂಬಗಿ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ. ನನ್ನ ಅಜ್ಜ ಪರಪ್ಪ ಇವರು ಜಮೀನುಗಳನ್ನು ಖರೀದಿಸಿರುವ ಬಗ್ಗೆ ನನಗೆ ಮಾಹಿತಿ ಇಲ್ಲಾ. ದಾವಾ ಸ್ವತ್ತುಗಳು ನನ್ನ ಪಿತ್ರಾರ್ಜಿತ ಸ್ವತ್ತುಗಳು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಜ್ಜ ತಮ್ಮ ಜೀವಿತಾವಧಿಯಲ್ಲಿ ಅವರ ಮಕ್ಕಳಿಗೆ ಸ್ವತ್ತುಗಳನ್ನು ವಾಟ್ನಿಮಾಡಿ ಕೊಟ್ಟಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಸರ್ವೆ ನಂ.151/1 ಪಿ1, ಸರ್ವೆ ನಂ.151/1 ಪಿ2 ಒಟ್ಟು ನಾಲ್ಕು ಎಕರೆ ಜಮೀನನ್ನು ನನ್ನ ಅಜ್ಜ ಪರಪ್ಪ ಖರೀದಿಸಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ತನ್ನ ತಂದೆ ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ.

4. ಸದರಿ ದಾವಾ ಜಮೀನುಗಳನ್ನು ನನ್ನ ಅಜ್ಜ 1960 ರಲ್ಲಿ ಖರೀದಿಸಿ 1962 ರಲ್ಲಿ ಮರಣ ಹೊಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಮತ್ತು ಚಿಕ್ಕಪ್ಪಂದಿರು 1966 ರಲ್ಲಿ ಸರ್ವೆ ನಂ.70 ಮತ್ತು 72 ಜಮೀನುಗಳ ವಾಟ್ನಿ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಪರಪ್ಪನ ಜೀವಿತಾವಧಿಯಲ್ಲಿ ವಾಟ್ನಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಉಳಿದ ದಾವಾ

ಸ್ವತ್ತುಗಳ ಕುರಿತಾಗಿ ನನ್ನ ತಂದೆ ಮತ್ತು ಚಿಕ್ಕಪ್ಪಂದಿರು 1972 ರಲ್ಲಿ ವಾಟ್ನಿ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ತನ್ನ ಪಾಲಿಗೆ ಬಂದ ಜಮೀನು ಸರ್ವೆ ನಂಬರ 151, 127, ಮತ್ತು 70 ಜಮೀನುಗಳನ್ನು 1 ನೇ ಪ್ರತಿವಾದಿಗೆ ಬಿಟ್ಟು ಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. ನಾನು ಜನಿಸುವ 4-5 ವರ್ಷಗಳ ಪೂರ್ವದಲ್ಲಿಯೇ 1 ನೇ ಪ್ರತಿವಾದಿ ಕುಟುಂಬದಿಂದ ಬೇರೆಯಾಗಿ ಹೋಗಿರುತ್ತಾನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಕುಟುಂಬದಿಂದ ಬೇರೆಯಾಗಿ ಹೋದದಿನದಿಂದ ಇಲ್ಲಿಯವರೆಗೂ ತನ್ನ ಸ್ವತ್ತುಗಳನ್ನು ಸ್ವಂತ ಸಾಗುವಳಿ ಮಾಡುತ್ತಾನೆ ಮತ್ತು ಏಕತ್ರ ಕುಟುಂಬದ ಸದಸ್ಯನಾಗಿ ಉಳಿದಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಸರ್ವೆ ನಂ.57/1 ಮತ್ತು 57/2 ಜಮೀನುಗಳನ್ನು ಖರೀದಿಸಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಎರಡು ಜಮೀನುಗಳನ್ನು 1 ನೇ ಪ್ರತಿವಾದಿಯು ತನ್ನ ಸ್ವಂತ ದುಡಿಮೆಯ ಹಣದಿಂದ ಖರೀದಿಸಿರುತ್ತಾನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ಜಮೀನುಗಳನ್ನು ತನ್ನ ತಂದೆ ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ದಾವಾ ಸ್ವತ್ತು ಕ್ರಮಾಂಕ 5 ಮತ್ತು 6 ಜಮೀನುಗಳನ್ನು ವಾಟ್ನಿ ಮಾಡಿ ತನ್ನ ಮಕ್ಕಳಾದ 4 ಮತ್ತು 5 ನೇ ಪ್ರತಿವಾದಿಯರಿಗೆ ಕೊಟ್ಟಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ಕಾಲವಕಾಶ ಕೋರುತ್ತಾರೆ, ಕಾಲವಾಶ ನೀಡಿ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಸಹಿ/-

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ